ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೯, ಫೆಬ್ರವರಿ-೨೦೧೮

ಕನ್ನಡದೊಲವೇ

ಕನ್ನಡದ ಸಾಕ್ಷಾತ್ಕಾರ ...

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೭

ಚಿಲುಮೆಯ ಒಳಗೆ

ರಾಂ ರಾಮ ... ಪು. ೪

ಕಥಾಚಿಲುಮೆ, ರೆಸಿಪಿ, ಕಾವ್ಯ ... ಪು. ೭/೮

ಚಿಲುಮೆಯ ಒಳಗೆ

ಪದಪುಂಜ ... ಪು. ೧೦

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೪

ಹೊಣೆಗಾರ (ಭಾಗ ೦೧)

ಕಥೆ

ಪು. ೧೨

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಇದು ಕವಿ ಜಿ.ಎಸ್ ಶಿವರುದ್ರಪ್ಪ ಅವರ ಮನೋಜ್ಞ ರಚನೆಯೆಂದು ಕಾವ್ಯಾಸಕ್ತರು ಪದೇ ಪದೇ ಉಲ್ಲೇಖಿಸುವ ಪದ್ಯ. ಅಮೂರ್ತರೂಪವಾದ ಪ್ರೀತಿಯನ್ನು ಹೀಗೆ ನಮ್ಮ ಸುತ್ತಮುತ್ತಲು ಕಾಣುವ ವಸ್ತು, ಜೀವಿಗಳೊಂದಿಗೆ ಬೆರೆಸಿನೋಡುವುದು ಕಬ್ಬಿಗರಿಗೆ ಹೊಸತೇನಲ್ಲ. ಮನಸ್ಸಿಗೇ ಇಷ್ಟೊಂದು ನಾಟುವ ಇಂತಹ ಪದ್ಯಗಳು, ಭಾವಕ್ಕೆ ಇನ್ನೆಷ್ಟು ಮುತ್ತಿಗೆ ಹಾಕುತ್ತವೆಯೆಂದು ಹೇಳಬೇಕಾದ್ದಿಲ್ಲ.

ಇಂತಹ ಕವನಗಳನ್ನು ಹೊಸೆದು ಕವಿಗಳು ಜಗತ್ತಿಗೆ ಏನು ಮಾಡಿಯಾರು ಎಂದು ಚಿಂತಿಸಿದರೆ ತಪ್ಪಿಲ್ಲ. ಏಕೆಂದರೆ ಚಿಂತನೆ ಮಾಡುವ ಮನುಷ್ಯನು ನಿಜಕ್ಕೂ ಜೀವಂತವಾಗಿದ್ದಾನೆ ಎನ್ನುವುದಕ್ಕೆ ಸಾಕ್ಷಿ. ಆದರೆ ಚಿಂತನೆಯ ಬದಲು ಕೇವಲ ಪ್ರಶ್ನೆ ಮಾಡುತ್ತಾ ಏನೂ ಕಂಡುಕೊಳ್ಳದೆ ನಿರರ್ಥಕ ಭಾವವನ್ನು ಹುಟ್ಟಿಸಿಕೊಂಡರೆ, ನಾವು ಜೀವನ ಮೌಲ್ಯವನ್ನು ಅರಿಯದೇ, ಕಳೆದುಕೊಳ್ಳುವುದೇ ಹೆಚ್ಚು. ಸಾಹಿತ್ಯವನ್ನು ಅಭ್ಯಸಿಸಿದಾಗ, ಇಂತಹ ಕವನಗಳನ್ನು ಓದಿದಾಗ, ಸಮಾನ ಮನಸ್ಕರೊಡನೆ ಸ್ಪಂದಿಸಿದಾಗ, ಒಂದು ಕನಸು ಬೆಳೆಯಬಹುದು, ಆ ಕನಸನ್ನು ಪೋಷಿಸಲು ಭಾವವೆಂಬ ಕೋಟೆ ಕಟ್ಟಬಹುದು, ನಮ್ಮದೇ ಆದ ಆ ಕೋಟೆಯೊಳಗೆ ರಾಜ್ಯಭಾರ ಮಾಡುತ್ತಾ ಜಗವನ್ನೇ ಗೆಲ್ಲಬಹುದು. ಇದು ತೀರಾ ಅಯೋಮಯವಾದ ಹೋಲಿಕೆ ಎಂದು ಅನಿಸಬಹುದು. ಆದರೆ ಭಾಷಾಲೋಕದಲ್ಲಿ ನೀವೊಮ್ಮೆ ಸಂಚರಿಸಿದರೆ ಇಂತಹ ನೂರೆಂಟು ಭಾವನೆಗಳು ನಿಮ್ಮನ್ನು ಸಹಜವಾಗಿ ಆವರಿಸಿಕೊಳ್ಳುತ್ತದೆ.

ಹೀಗೆ ಭಾಷೆಯೆಂಬ ಉದ್ಯಾನವನದಲ್ಲಿ ಭಾವವೆಂಬ ಹೂವು ಅರಳಿದರೆ, ಅನುದಿನವೂ ಜೇನಹೊಳೆ ಹರಿಯುವುದರಲ್ಲಿ ಸಂದೇಹವೇ ಇಲ್ಲ. ಹಾಗೆ ಹರಿದ ಜೇನಹೊಳೆಯ ರಾಗವು ನಿಮ್ಮಲ್ಲಿ ಕವಿತೆ ಹುಟ್ಟಿಸದೇ ಬಿಡುವುದಿಲ್ಲ. ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ "ಸವಿವಣ್ಣಲ್ಲಿ ಇನಿಮಾವು ..." ಎಂಬಂತೆ "ಕವಿತಾವಿದ್ಯೆ ಸುವಿದ್ಯೆಯೊಳ್" ಎಂದು ಕಾವ್ಯದ ಹಿರಿಮೆಯನ್ನು ಅನೇಕರು ಕೊಂಡಾಡಿದ್ದಾರೆ.

ಪ್ರೀತಿಯಿಂದ ಶುರುವಾದ ಈ ಸಂಚಿಕೆಯ ಮಾತುಗಳು ಈಗ ಬಿನ್ನಹಕ್ಕೆ ಬಂದು ನಿಂತಿದೆ. ಹೇಗೆ ಪ್ರೀತಿಯೊಂದೇ ಈ ಜಗತ್ತನ್ನು ಮುಂದುವರಿಸಿಕೊಂಡು ಹೋಗುತ್ತಿದೆಯೋ, ಹಾಗೆ ಭಾಷೆಯನ್ನೂ ಕೂಡ ಪೋಷಿಸಿಕೊಂಡು ಹೋಗುವುದು, ಅದೇ ಭಾಷಾ ಪ್ರೀತಿಯು. ಕನ್ನಡದ ಬಗೆಗಿನ ನಮ್ಮಯ ಒಲವೇ ಕನ್ನಡ ಸಾಹಿತ್ಯವನ್ನು ನಮ್ಮಲ್ಲಿ ಸಾಕ್ಷಾತ್ಕರಿಸಿಕೊಳ್ಳುವುದಕ್ಕೂ ಕನ್ನಡವನ್ನು ಬೆಳಸುವುದಕ್ಕೂ ದಾರಿ. ಯಾವುದೇ ಸಂಘ ಸಂಸ್ಥೆಗಳ ಬಾವುಟದ ಪೊಳ್ಳು ಸಂಯೋಗವಿಲ್ಲದೇ ಸಂಪೂರ್ಣ ತೃಪ್ತಿ ಕೊಡುವ ಸಾಹಿತ್ಯ ರಚನೆ ಮತ್ತು ಸಾಹಿತ್ಯಾಸ್ವಾದನೆಗೆ ನಮ್ಮ ಪ್ರೀತಿಯು ಮುಡುಪಾಗಿರಲಿ. ಅಂತಹ ಕನ್ನಡ ಪ್ರೀತಿಯಿಂದ ಕಥೆ, ಕಾವ್ಯ, ಕಾದಂಬರಿ ಇತ್ಯಾದಿ ಸಾಹಿತ್ಯಿಕ ಕೃತಿಗಳು ನಮ್ಮೆಲ್ಲರಿಂದ ಹುಟ್ಟಿ ಬರಲಿ. ನಮ್ಮೆಲ್ಲರಲ್ಲಿ ಆಗುವಂತಹ ಅಂತಹ ಕನ್ನಡ ಸಾಕ್ಷಾತ್ಕಾರವನ್ನು ಜಗತ್ತು ಕಾಣಲಿ. ▪

ತಿರುಳ್ಗನ್ನಡದ ಬೆಳ್ನುಡಿಯೊಳ್ ಪುರುಳೊಂದೇ ಪೇಳ್ವುದು ಕನ್ನಡಂ ಕಸ್ತೂರಿಯಲ್ತೆ !

■ ಮುದ್ದಣನ ರಾಮಾಶ್ವಮೇಧ

[ಮುದ್ದಣನು ಮನೋರಮೆಗೆ ಸಂಸ್ಕೃತ ಪದ್ಯರೂಪದಲ್ಲಿ ರಾಮಾಯಣದ ಕಥೆಯನ್ನು ಶುರು ಮಾಡಿದಾಗ ಸತ್ವಯುತವಾದ ಕನ್ನಡದ ಸವಿನುಡಿಯಲ್ಲೇ ಕಥೆಯನ್ನು ಹೇಳು, ಕನ್ನಡವೇ ಕಸ್ತೂರಿಯಲ್ಲವೆ ಎನ್ನುತ್ತಾ, ಕನ್ನಡ ಪ್ರೇಮವನ್ನು ವ್ಯಕ್ತಪಡಿಸುತ್ತಾಳೆ]



ತಳಮಳವಿದೇನಿಳೆಗೆ? ದೇವದನುಜರ್ ಮಥಿಸೆ |
ಜಳಧಿಯೊಳಾದಂತೆ ಸುಧೆಗೆ ಪೀಠಿಕೆಯೇಂ? ||
ಹಾಲಾಹಲವ ಕುಡಿವ ಗಿರೀಶನಿರ್ದೊಡೀ |
ಕಳವಳವದೇತಕೆಲೋ?-ಮಂಕುತಿಮ್ಮ ||

ತಳಮಳವಿದೇನಿಳೆಗೆ = ತಳಮಳವಿದು + ಏನು + ಇಳೆಗೆ, ದೇವದನುಜರ್ = ದೇವದ + ಅನುಜರ್,
ಜಳಧಿಯೊಳಾದಂತೆ = ಜಲಧಿಯೊಳು + ಆದಂತೆ, ಗಿರೀಶನಿರ್ದೊಡೀ = ಗಿರೀಶನು + ಇರ್ದೊಡೆ,
ಕಳವಳವದೇತಕೆಲೋ = ಕಳವಳವು + ಅದು + ಏತಕೆ + ಎಲೋ,
ದೇವದನುಜರ್ = ದೇವಲೋಕದ ಅಣ್ಣ ತವ್ಮಂದಿರು, ಮಥಿಸೆ = ಕಡೆಯೆ, ಜಲಧಿ = ಸಮುದ್ರ, ಸುಧೆ = ಅಮೃತ, ಪೀಠಿಕೆ = ಭೂಮಿಕೆ, ಪ್ರಸ್ತಾವನೆ, ಹಾಲಾಹಲ = ವಿಷ, ಗಿರೀಶ = ಶಿವ

ಇಲ್ಲಿ ಒಂದು ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾರೆ, ಶ್ರೀ ಗುಂಡಪ್ಪನವರು. ಆಗ ಎಲ್ಲೆಲ್ಲೂ ಅತಂತ್ರದ ಸ್ಥಿತಿ. ಹಳೆಯ ಭಕ್ತಿ ಶ್ರದ್ಧೆಗಳು ನಶಿಸಿ ಹೊಸದು ಯಾವುದೂ ಇಲ್ಲದೆ, ಒಂದು ಅತಂತ್ರದ ಸ್ಥಿತಿ ಇದೆ. ಜನರೆಲ್ಲಾ ಕಳವಳಗೊಂಡು ತಳಮಳಿಸುತ್ತಿದ್ದಾರೆ. ಅಂತಹ ಸ್ಥಿತಿಯಲ್ಲಿ ಇವರಿಗೊಂದು ಆಶಾಭಾವನೆ. ಅದನ್ನು ಅವರು ಈ ಮುಕ್ತಕದಲ್ಲಿ ಸೂಚಿಸುತ್ತಾರೆ.

ಹಿಂದೆ, ದೇವಲೋಕದಲ್ಲಿ ಅಮೃತವನ್ನು ಪಡೆಯಲು ಸಮುದ್ರ ಮಂಥನ ನಡೆಯಿತು. ಅದನ್ನು ನಡೆಸಿದವರು ದೇವತೆಗಳು ಮತ್ತು ದಾನವರು. ಇವರನ್ನು ಗುಂಡಪ್ಪನವರು ಸೂಕ್ತವಾಗಿ "ದೇವಲೋಕದ ಅನುಜರ್" ಎಂದು ಸಂಬೋಧಿಸುತ್ತಾರೆ. ಏಕೆಂದರೆ ಪುರಾಣದ ಪ್ರಕಾರ ಈ ದೇವತೆಗಳು ಮತ್ತು ದಾನವರು ಇಬ್ಬರೂ ಕಶ್ಯಪ ಬ್ರಹ್ಮನ ಮಕ್ಕಳು. ಹಾಗಾಗಿ ಅವರನ್ನು ಅಣ್ಣ ತವ್ಮಂದಿರು ಎಂದಿದ್ದಾರೆ. ಮಂಥನದಲ್ಲಿ ಮೊದಲು ಹಾಲಾಹಲ ಅಂದರೆ ವಿಷದ ಉದ್ಭವವಾಯಿತಂತೆ. ಘನ ಘೋರ ವಿಷವನ್ನು ಲೋಕ ಕಲ್ಯಾಣಕ್ಕಾಗಿ ಗಿರಿಜಾಪತಿ ಪರಮಶಿವನು ಕುಡಿದುಬಿಟ್ಟನಂತೆ. ಅದನ್ನು ಪಾರ್ವತಿ ಕಂಠದಲ್ಲೇ ತಡೆದದ್ದರಿಂದ ಅದು ಅಲ್ಲೇ ನಿಂತು, ಶಿವನು, "ನೀಲಕಂಠ ಮತ್ತು ವಿಷಕಂಠ" ನಾದನಂತೆ. ಹಿಂದಿನ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು "ಹಳೆ ಧರ್ಮ ಸತ್ತಿಹುದು ಹೊಸ ಧರ್ಮ ಹುಟ್ಟಿಲ್ಲ-ತಳಮಳಕೆ ಕಡೆಯೆಂದು" ಎಂದು ತಮ್ಮ ಕಳವಳವನ್ನು ವ್ಯಕ್ತಪಡಿಸುತ್ತಾರೆ. ಆ ಕಳವಳಕ್ಕೆ ಉತ್ತರವೆಂಬಂತೆ ಈ ಮುಕ್ತಕದಲ್ಲಿ ಈ ರೀತಿಯ ಕಳವಳ, ತಳಮಳಗಳು ಸಹಜ. ಒಂದು ಉತ್ತಮವಾದ ವಸ್ತು ಈ ಪ್ರಪಂಚಕ್ಕೆ ಸಿಗಬೇಕಾದರೆ ಈ ರೀತಿಯ ಮಂಥನವಾಗಬೇಕು.

ಮನುಷ್ಯನ ಮನಸ್ಸಿನಲ್ಲಿ ಒಳ್ಳೆಯದು ಕೆಟ್ಟದ್ದು ಎರಡೂ ಇರುತ್ತದೆ. ಯಾವುದು ಅಧಿಕವಾಗಿದ್ದರೆ ಅದರ ಪ್ರಾಬಲ್ಯ. ಆದರೆ ಒಂದು ವ್ಯಕ್ತಿಯಿಂದ ಮಹತ್ತರ ಕಾರ್ಯವಾಗಬೇಕಾದರೆ ಆಂತರ್ಯದಲ್ಲೂ ತಿಕ್ಕಾಟಗಳು ತುಮುಲಗಳು ನಿರಂತರ ನಡೆಯಬೇಕು ಸಮುದ್ರ ಮಂಥನದ ರೀತಿ. ನಮ್ಮ ಲೋಕದ ಮಹಾ ಮಹಿಮರೆಲ್ಲರಿಗೂ ಇಂಥಹ ಅನುಭವವಾಗಿದೆ. ಅವರ ಪ್ರಯತ್ನದಲ್ಲಿ ಅವರಿಗೆ "ವಿಷ" ರೂಪದಲ್ಲಿ ಬೇಕಾದಷ್ಟು ಕಷ್ಟಗಳು ಬಂದಿವೆ. ಆ ಮಹಾಮಹಿಮರೆಲ್ಲ ಅಂತಹ ಕಷ್ಟಗಳನ್ನೆಲ್ಲ "ಪರಶಿವನು ಹಾಲಾಹಲವನ್ನು ಕುಡಿದಂತೆ" ನುಂಗಿ ಲೋಕ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ತ್ಯಾಗಮಾಡಿದ್ದಾರೆ. ಉದಾಹರಣೆಗೆ, ನಮ್ಮ ದೇಶಕ್ಕೆ ಚಾಣಕ್ಯ (ವಿಷ್ಣುಶರ್ಮ)ನ ಕೊಡುಗೆ ಅಪಾರ. ಹೀಗೆ, ಶಂಕರರು, ರಾಮಾನುಜರು, ಬಸವಣ್ಣನವರು, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್‌ಸಿಂಗ್, ಚಂದ್ರಶೇಖರ್ ಅಜಾದ್, ರಾಜಗುರು, ಬೋಸ್ ಮುಂತಾದ ಅನೇಕ ವೀರರು ಸ್ವಾರ್ಥ ತೊರೆದು ಲೋಕಕಲ್ಯಾಣಕ್ಕಾಗಿ ಕಷ್ಟಗಳೆಂಬ ವಿಷವನ್ನು, ಪರಶಿವನಂತೆ ಕುಡಿದ ದೃಷ್ಟಾಂತಗಳು ನಮಗೆ ಹೇರಳವಾಗಿ ಸಿಗುತ್ತದೆ.

ಅಂದು ಪರಶಿವನು "ವಿಷ"ವನ್ನು ಕುಡಿದು ಲೋಕಕಲ್ಯಾಣವನ್ನು ಮಾಡಿದ ಹಾಗೆ ಇಂದೂ ಯಾರಾದರೂ ಬರಬಹುದೆಂದು ಅವರ ಆಸೆ. ಅವರ ಆಶಾಭಾವಕ್ಕೆ ಒಂದು ನಮಸ್ಕಾರ. ಆದರೆ ವಾಚಕರೆ, ವಿಚಾರ ಮಾಡಿನೋಡಿ. ಸಮಾಜ ಪ್ರೀತಿ ಕರುಣೆ ವಾತ್ಸಲ್ಯಗಳ ಕೊರತೆಯಿಂದ ಸೊರಗಿದೆ. ಹಳೆಯ ಶ್ರದ್ಧೆ-ಭಕ್ತಿಗಳ ಮತ್ತು ಆಧುನಿಕತೆಯ, ಡಂಬ ತೋರಿಕೆಯ ಜೀವನದ ನಡುವೆಯ ಅಂತರ ಅಗಾಧವಾಗುತ್ತಿದೆ.

ಅಂದು ಈಗ್ಗೆ ಎಂಬತ್ತು ವರ್ಷಗಳ ಹಿಂದೆ ಡಿ.ವಿ.ಜಿ.ಯವರು ಕಂಡ ಅಮೃತದ ಕನಸು ನನಸಾಗುವ ಕಾಲ ಬಂದೀತೆ ಎಂದರೆ, ನಾವು ಆಶಾಭಾವನೆಯನ್ನು ಎಂದಿಗೂ ಬಿಡಬಾರದು, ಇಂದಿನ ಯುವ ಪೀಳಿಗೆಗೆ ಮತ್ತು ಮುಂದಿನ ಪೀಳಿಗೆಗೆ, ಹಿಂದಿನ ತತ್ವಗಳ ಸತ್ವವನ್ನು ತಿಳಿಸಿಕೊಡಬೇಕು. ಅವುಗಳ ಅರಿವು ಮೂಡಿಸಬೇಕು. ಬಹಳಷ್ಟು ಜನ ಆ ಪ್ರಯತ್ನದಲ್ಲಿ ಇದ್ದರೂ ಇಷ್ಟು ವಿಶಾಲವಾದ ದೇಶದಲ್ಲಿ ಆಧುನಿಕತೆಯ ಪೊಳ್ಳು ಸಂಸ್ಕೃತಿಯ ವ್ಯಾಪ್ತಿಯನ್ನು ಮಟ್ಟಹಾಕಲು ಇನ್ನೂ ಸಾಧ್ಯವಾಗಿಲ್ಲ. ಶೀಘ್ರವೇ ಫಲ ಬೇಕಾದಲ್ಲಿ, ಸಮರೋಪಾದಿ ಕಾರ್ಯಗಳು ನಡೆದು ನಮ್ಮ ಭಾರತೀಯತೆಯನ್ನು ಅರಿತುಕೊಳ್ಳಲು ಮತ್ತು ಕಾಪಾಡಲು ಎಲ್ಲರೂ ಪ್ರವೃತ್ತರಾಗಬೇಕು. ಅದಕ್ಕೆ ನಾವು ನೀವು ಎಲ್ಲರೂ ಪ್ರಯತ್ನಪಟ್ಟು ನಮ್ಮ ಸುತ್ತು ಮುತ್ತಲಿನವರನ್ನೂ ಅದಕ್ಕೆ ಪ್ರೇರೇಪಿಸಿದರೆ ಅದು ಸಾಧ್ಯ.. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ರಟ್ಟಾದ ಗುಟ್ಟು (ಒಂದು ಪ್ರಹಸನ)

ರಾಯರು, ಶಾಸ್ತ್ರಿಗಳು ಬಹಳ ಹಳೆಯ ಸ್ನೇಹಿತರು. ಇಬ್ಬರಿಗೂ ಕಿವುಡು ಇದ್ದರೂ ಇಬ್ಬರೂ ಅದನ್ನು ತೋರಿಸಿಕೊಳ್ಳಲು ಬಯಸುವುದಿಲ್ಲ. ಮಕ್ಕಳು ಬಲವಂತ ಮಾಡಿ ಕೊಟ್ಟಿರುವ ಹಿಯರಿಂಗ್ ಏಯ್ಡ್ ನಿರುದ್ಯೋಗಿಯಾಗಿ ಮೂಲೆ ಸೇರಿದೆ. ಶಾಸ್ತ್ರಿಗಳು ಕುಳಿತಿದ್ದಾರೆ. ರಾಯರು ಒಳಬರುತ್ತಾರೆ.

ರಾ: ಹೇಗಿದ್ದಾರೆ ನಿಮ್ಮ ಮನೆಯ ಜನವೆಲ್ಲ?

ಶಾ: ಆ? ಶ್ವಾನಗಳೆಲ್ಲ ಅಂದ್ರೆ? ಎಲ್ಲೋ ಚೈನ್ ಬಿಚ್ಕೊಂಡು ಹೋಗಿವೆ. ಸುತ್ತಾಡ್ಕೊಂಡು ಬರತ್ವೆ.

ರಾ: ಏನಂದ್ರಿ? ವ್ಯಾನುಗಳಲ್ಲಿ ಹೋಗಿದಾರೆ ಅಂದ್ರೆ? ನಿಮ್ಮಲ್ಲಿ ಇದ್ದಿದ್ದು ಕಾರ್ ಅಲ್ಲವೇ? ಕಾರ್ (ಸ್ಟೀರಿಂಗ್ ವೀಲ್ ಸನ್ನೆ ಮಾಡುವನು)

ಶಾ: ಚಕ್ರವೇ? ಯಾವುದು ಬೇಕು? ಶ್ರೀಚಕ್ರವೋ, ಪದ್ಮಚಕ್ರವೋ, ಧನಚಕ್ರವೋ?

ರಾ: ಶಕ್ರವೇ ಅಂದಿರೇನು? ಪರವಾಯಿಲ್ಲ ಸ್ವಲ್ಪ ಹಾಕಿ. ಮಧುಮೇಹ ಏನಿಲ್ಲ

ಶಾ: (ದನಿಯೇರಿಸಿ) ಏನಂದ್ರಿ? ಇಲ್ಲಿ ಕೊಂಚ ಶಬ್ದ ಜಾಸ್ತಿ... ಒಸಿ ಧ್ವನಿ ಏರಿಸಿದರೆ ವಾಸಿ...

ರಾ: (ದನಿಯೇರಿಸಿ) ಮಧುಮೇಹ ಇಲ್ಲ ಅಂದೆ...

ಶಾ: (ತಲೆಯಾಡಿಸುತ್ತಾ) ಸರಿಯೇ. ಈ ವಯಸ್ಸಿನಲ್ಲಿ ವಧುಮೋಹ ಇರೋದು ತಪ್ಪೇ...

ರಾ: ಕಪ್ಪೆ? ಇಲ್ಲಿ ಕಪ್ಪೆಗಳು ಹೆಚ್ಚಾಗಿ ಇವೆಯೇನು? ಓ! ಕಪ್ಪು ಮೀನಿಂಗ್ ಬ್ಲ್ಯಾಕು! ಕಪ್ಪೇ ಅಂದ್ರೆ ನೀವು ನನಗೆ? ಕರಿಬಣ್ಣ ನಾನಿದ್ರೆ ನಿಮಗೇನು ತೊಂದರೆ? ಮನುಷ್ಯ ಕಪ್ಪು ಇರೋದು ತಪ್ಪೆ?

ಶಾ: (ಕಿರಿಕಿರಿಯಿಂದ) ಆ? ಬೆಪ್ಪೆ ಅಂದಿರೆ? ನಾನು ಬೆಪ್ಪೆ? ಮೊದ್ದೇ ನಾನು? ಊರಿಗೆಲ್ಲ ಶಾಸ್ತ್ರ ಹೇಳೋ ನಾನು ಮೊದ್ದೆ?

ರಾ: ಬಹಳ ಸದ್ದು... ಸರಿಯಾಗಿ ಕೇಳೋದೇ ಇಲ್ಲ... ನಿದ್ದೆ ಅಂದ್ರೆ ನೀವು? ಮಲಗಿ. ಆಮೇಲೆ ಬರ್ತೀನಿ (ಹೊರಹೊರಡುವರು)

ಶಾ: (ಗೊಂದಲಗೊಂಡು) ಅಯ್ಯೋ, ಹಾಗೇ ಹೊರಟಿರಲ್ಲ.... ಬನ್ನಿ ಬನ್ನಿ (ಕೈಹಿಡಿದು ನಿಲ್ಲಿಸುವನು)

ರಾ: ನಿಮ್ಮ ಕೈ ಹಿಡಿದಾಕೆ ಇಲ್ಲವೇ ಮನೇಲಿ?

ಶಾ: ಯಾರು?

ರಾ: (ದನಿಯೇರಿಸಿ) ನಿಮ್ಮ ಹೆಂಡತಿ... ಸತಿ...

ಶಾ: ನನ್ನ ಹೆಂಡತಿ ತಿಥೀನೇ? ಯಾಕ್ರಾಯ್ರೀ ಏನೇನೋ ಹೇಳ್ತಿದೀರೀ... (ಕಣ್ಣಲ್ಲಿ ನೀರು ತುಂಬಿಕೊಳ್ಳುವನು)

ರಾ: (ಗೊಂದಲದಿಂದ) ಏನಾಯ್ತು?

ಶಾ: ನನ್ನ ಹೆಂಡತಿ ತಿಥಿ ಅಂದ್ರಲ್ಲಾ ನೀವೂ... (ಹೆಂಡತಿ ಎನ್ನಲು ಮೂಗುಬೊಟ್ಟು, ತಿಥಿ ಎನ್ನಲು ಸತ್ತಿರುವ ಭಂಗಿ ತೋರಿಸುವನು)

ರಾ: ಅಯ್ಯೋ... ತಿಥಿ ಅನ್ನಲಿಲ್ಲ ನಾನು, ಸತಿ ಅಂದೇ... (ಕೈಯಲ್ಲಿ ಸ ತಿ ಬರೆದು ತೋರಿಸಿ, ಎಲ್ಲಿ ಎಂಬ ಸನ್ನೆ ಮಾಡುತ್ತಾ) ಸತಿ ಎಲ್ಲಿ ಅಂದೆ... ಕ್ಷಮಿಸಿ... ಸುತ್ತಲೂ ಸದ್ದು ಬಹಳ ನೋಡಿ... ಅಪಾರ್ಥವಾಯಿತು...

ಶಾ: ಸತಿ ಎಲ್ಲಿ ಅಂದ್ರಾ... ಟಾಯ್ಲೆಟ್‌ಗೆ ಹೋಗ್ಬರ್ತೀನೀಂತ ಹೋದಳು. ಸಂಜೆ ಬರ್ತಾಳೆ

ರಾ: (ಅಚ್ಚರಿಯಿಂದ, ಜೋರಾಗಿ) ಟಾಯ್ಲೆಟ್‌ಗೆ ಹೋಗಬೇಕಾದರೆ ಅರ್ಧ ದಿನ ಬೇಕೆ?

ಶಾ: ಛಿ! ನೀವು ತಿಳಿದ ಹಾಗೆ ಅಲ್ಲ ರಾಯರೇ.... ಫಿಲ್ಮ್... ಹಿಂದಿ ಫಿಲ್ಮ್.... (ಆಕ್ಷನ್ ಮೂಲಕ ತೋರಿಸುವನು)

ರಾ: ಓಹ್! ತಿಳಿಯಿತು. ಬಹಳ ದಿನ ಆಯ್ತು. ನಿಮ್ಮ ಆರೋಗ್ಯ ಹೇಗಿದೆ?

ಶಾ: ಅಯೋಗ್ಯನೆ? ಯಾರು?

ರಾ: (ದನಿಯೇರಿಸಿ) ಆರೋಗ್ಯ... ಹೆಲ್ತ್...

ಶಾ: ವೆಲ್ತೇ? (ಸಂಶಯದಿಂದ) ರಾಯರೇ... ನೀವು ಲೋಕಾಯುಕ್ತ, ಎಸಿಬಿ, ಸಿಸಿಬಿ, ಯಾವುದಾದರೂ ಡಿಪಾರ್ಟ್ ಮೆಂಟಲ್ ಜನ ಅಲ್ಲ ತಾನೆ?

ರಾ: ಮೆಂಟಲ್ಲೂ... ನನ್ನನ್ನ ನೋಡಿದರೆ ನಿಮಗೆ ಮೆಂಟಲ್ಲೂ ಅನ್ನಿಸ್ತೇ? ನಿಮ್ಮ ಮನೆಗೆ ಬಂದವರಿಗೆ ಇದೇನೇನ್ರೀ ನೀವು ತೋರಿಸೋ (ದನಿಯೇರಿಸಿ) ಹಾಸ್ಪಿಟಾಲಿಟಿ...?

ಶಾ: ಹಾಸ್ಪಿಟಲ್‌ನಿಂದ ಬಂದಿರೇ... ಪಾಪ! ನೋಡಿದಾಗಲೇ ಅಂದ್ಕೊಂಡೆ... ಬಹಳ (ದನಿಯೇರಿಸಿ) ಬಡವಾಗಿದೀರೀ..

ರಾ: (ಸ್ವಗತ) ಬಡವ? ನಾನು ಬಡವನ ತರಹ ಇದೀನಾ? ಅಥವಾ... ಭಡವ ಅಂತ ಬೈದ್ನೋ ಈ ಶಾಸ್ತ್ರಿ....? (ಪ್ರಕಾಶ) ನಾನು ಬಡವನೆ? ನನ್ನ ಮಗ ಮೊನ್ನೆ (ದನಿಯೇರಿಸಿ) ಮರ್ಸಿಡಿಸ್ ಬೆಂಜ್ ತೊಗೊಂಡ ತಿಳೀತೇ?

ಶಾ: ಬೆಂಚೇ.... ಬುದ್ಧಿ ಇಲ್ಲ ಅವನಿಗೆ... ಈಗಿನ ಕಾಲಕ್ಕೆ ಸ್ಪೇಸ್ ಆಕ್ಯುಪೈ ಮಾಡೋ ಬೆಂಚಿಗಿಂತ ಫೋಲ್ಡಿಂಗ್ ಚೇರ್ ವಾಸಿ ರಾಯರೇ...

ರಾ: ಏನಂದ್ರಿ....? ಕೋಲ್ಡ್ ಡ್ರಿಂಕ್ಸ್ ಕೊಡ್ತೀನಿ ಅಂದ್ರೆ? ಬೇಡ. ಶೀತ ಆಗತ್ತೆ (ಎಂದು ಅಡ್ಡಡ್ಡ ಕೈಯಾಡಿಸುವನು)

ಪುಟ - 4
ಮುಂದಿನ ಪುಟ ನೋಡಿ ...

ಶಾ: ಬಿಡಿ. ಬೆಂಚೇ ಬೇಕು ಅಂದ್ರೆ ನಾನೇನ್ಮಾಡಕ್ಕಾಗತ್ತೆ... ಇರಲಿ... ಏನು ಸಂದರ್ಭ ಬಂದದ್ದೂಂತೀನೀ...

ರಾ: ಒಂದು ಶುಭ ಸಂದರ್ಭ ತಿಳಿಸೋಣ ಅಂತ ನಿಮ್ಮ ಹತ್ರ ಬಂದೆ

ಶಾ: ಆ? ಏನಂದ್ರಿ?

ರಾ: ಸಂದರ್ಭ ಅಂದೆ... ಶುಭ ಸಂದರ್ಭ

ಶಾ: ತಿಳೀತು ತಿಳೀತು... ಶವ ಸಂದರ್ಭ.... ಸರಿ ಸರಿ ಸಂತೋಷ...

ರಾ: ಹಾ! ಶುಭ ಸಂದರ್ಭವೇ... ನಮ್ಮ ಮನೆಯಲ್ಲಿ ದೇವರ ಸಮಾರಾಧನೆ ಇಟ್ಕೊಂಡಿದೀವಿ

ಶಾ: ಆ? ಏನಂದ್ರಿ?

ರಾ: ದೇವರ ಸಮಾರಾಧನೆ ಅಂದೆ... (ದನಿಯೇರಿಸಿ) ಶ್ರೀಕಂಠನ ಮದುವೇದು...

ಶಾ: ತಿಳೀತು ತಿಳೀತು... (ಗಟ್ಟಿಯಾಗಿ) ವೈಕುಂಠ ...

ರಾ: ಶ್ರೀಕಂಠಾ... ಶ್ರೀಕಂಠನ ಮದುವೇದು

ಶಾ: ತಿಳೀತೂ ವೈಕುಂಠಾ ವೈಕುಂಠ ಸಮಾರಾಧನೇದು.... (ಜೋರಾಗಿ) ಸಮಾರಾಧನೆ

ರಾ: ಕರೆಕ್ಟ್... ಸಮಾರಾಧನೆ...

ಶಾ: ಯಾವತ್ತು?

ರಾ: (ಎರಡೂ ಕೈಬೆರಳುಗಳನ್ನು ತೋರಿಸುತ್ತಾ) ಇಂದಿನಿಂದ ಒಂಬತ್ತು ದಿನಕ್ಕೆ....

ಶಾ: ಸರಿ ಸರಿ. ಇಂದಿನಿಂದ ಒಂಬತ್ತು ದಿನಕ್ಕೆ.... ಅಂದರೆ ನಾಲ್ಕು ದಿನ ಹಿಂದೆ ತೀರಿಕೊಂಡಿದ್ದು ಅನ್ನಿ.... (ನಾಲ್ಕು ಅನ್ನುವುದನ್ನು ಬೆರಳುಗಳಲ್ಲಿ ತೋರಿಸುವನು)

ರಾ: ನಿಜ. (ಕಣ್ಣಲ್ಲಿ ನೀರು ತಂದುಕೊಂಡು) ನಾಲ್ಕು ವರ್ಷದಿಂದ ಲವ್ ಮಾಡ್ತಿದ್ರಂತೆ... ನಮ್ಮ ಗ್ರಹಚಾರ...

ಶಾ: ಅಳಬೇಡಿ... ಎಲ್ಲಾ ಆ ಜಗನ್ನಿಯಾಮಕನ ಆಟ.

ರಾ: ಆ?

ಶಾ: ಎಲ್ಲ ಅವನ ಆಟ ಅಂದೆ... (ಜೋರಾಗಿ) ಆಟಾ...

ರಾ: ಹೂ. ಬಹಳ ಆಟ ಆಡ್ಬಿಟ್ಟ.... ಮಳ್ಳ, ಮಳ್ಳ ಇದ್ದಹಾಗಿದ್ದ... ಗೊತ್ತೇ ಆಗಲಿಲ್ಲ (ಮತ್ತೆ ಅಳುವನು)

ಶಾ: ಅಳಬೇಡಿ ರಾಯರೇ,

ರಾ: ಆ?

ಶಾ: ಅವನು ಕರೆದಾಗ ನಾವು ಹೋಗಲೇಬೇಕು.... (ಹೋಗಲೇಬೇಕು ಅನ್ನುವುದನ್ನು ಸೂಚಿಸುವನು)

ರಾ: ನಿಜ. ಹೋಗಲೇಬೇಕು. ಒಬ್ಬನೇ ಮಗ. ಕುಲಪುತ್ರ. ಆದ್ರೂ... ಕುಲಪಾತಕಿ ಕುಲಪಾತಕಿ

ಶಾ: ಕೊಲೆಪಾತಕಿ? ಕೊಲೆ ಆದನೇನು? ಯಾರು?

ರಾ: ಆ?

ಶಾ: ಯಾರು? ಯಾರೂಂದೆ (ಕೈಸನ್ನೆಯಲ್ಲಿ ಯಾರು ಎಂದು ತೋರಿಸುತ್ತಾ ದನಿಯೇರಿಸುವರು)



ರಾ: ಯಾರೂಂದ್ರೇ.... ನನ್ನ ಮಗ....

ಶಾ: ಆ? ಮಗನೇ? ಕೊಲೆ ಆದನೆ?

ರಾ: ಆ?

ಶಾ: ಕೊಲೆ.... ಕೊಲೆ...

ರಾ: (ತಲೆಯಾಡಿಸುತ್ತಾ, ಸ್ವಗತ - ಏನೋ ಲೆಲೆ ಅಂತಿದಾನೆ, ಬಲೆನೆ ಇರಬೇಕು) ನಿಜ. ಬಲೆ... ಬಲೇನೇ... ಅವಳ ಬಲೇಲಿ ಇವನು ಸಿಕ್ಕಿ ನಮಗೆ (ನಟನೆಯಲ್ಲಿ ತೋರಿಸುತ್ತಾ) ಬೆನ್ನಿಗೆ ಚೂರಿ ಹಾಕ್ಬಿಟ್ಟ

ಶಾ: ತ್ಸುತ್ಸುತ್ಸು.... ಚೂರಿಯಿಂದ ಕೊಲೆ ಆಯ್ತೂನ್ನಿ.... (ಜೋರಾಗಿ) ಪಾಪ ಪಾಪ!

ರಾ: ಪಾಪವೇ ಅಲ್ಲವೇ ಮತ್ತೆ! ಕರುಳು, ಕರುಳು (ಹೊಟ್ಟೆಯನ್ನು ತೋರಿಸುತ್ತಾ) ಕರುಳು ಚುರ್ ಅನ್ನತ್ತೆ ಸ್ವಾಮೀ...

ಶಾ: (ಹೊಟ್ಟೆಯನ್ನೇ ನೋಡುತ್ತಾ) ಛೆಛೆ! ಹೊಟ್ಟೆಗೂ ಚೂರಿ ಹಾಕಿದರೇನು? ಛೆ! ಅನ್ಯಾಯ. ಅದಿರ್ಲಿ... ಅಸ್ಥಿ ಸಂಚಯನ ಆಯಿತಾ?

ರಾ: ಆ?

ಶಾ: ಅಸ್ಥಿ... ಅಸ್ಥಿ...

ರಾ: ಹೂ... ಅದರಲ್ಲೇನು ತೊಂದರೆ ಇಲ್ಲ ಅನ್ನಿ.... ಆಸ್ತಿ ಚೆನ್ನಾಗೇ ಇದೆ. ಬೆಂಗಳೂರಲ್ಲಿ ಫಾರ್ಟಿ ಸಿಕ್ಸ್ಟಿ ಸೈಟು... ಚನ್ನರಾಯಪಟ್ಟಣದಲ್ಲಿ ಜಮೀನು...

ಶಾ: ಎಲ್ಲಿ?

ಮುಂದಿನ ಪುಟ ನೋಡಿ ...

ರಾ: ಚನ್ನರಾಯಪಟ್ಟಣ....

ಶಾ: ತಿಳೀತು ತಿಳೀತು... ಪಟ್ಟಣ... ಶ್ರೀರಂಗಪಟ್ಟಣ... ಅಸ್ಥಿ ಸಂಚಯನ ಅಲ್ಲಾಯಿತೂನ್ನಿ... ಲೋಕಪಾವನಿ ನದಿ

ರಾ: ಆ? ಗೋಧೀನೇ? ಚನ್ನರಾಯಪಟ್ಟಣದಲ್ಲಿ ಗೋಧಿ ಎಲ್ಬಂತು... ಚನ್ನರಾಯಪಟ್ಟಣ... ತೆಂಗಿನಕಾಯಿ (ತೆಂಗಿನಕಾಯಿ ಆಕಾರವನ್ನು ತೋರಿಸುವನು. ಶಾಸ್ತ್ರಿಗಳಿಗೆ ತಿಳಿಯದೆ ಇರಲು ಬೊಗಸೆ ಹಿಡಿದು ಕೊಬ್ಬರಿ ಗಿಟುಕಿನ ಸನ್ನೆ ಮಾಡುವನು)

ಶಾ: ಓ! ನಿಮ್ಮ ಕೈಗೆ ಚಿಪ್ಪೇ ಗಟ್ಟಿ ಅಂದ್ರೇ? ಮಗ ಹೋದ್ಮೇಲೆ ಹಾಗನ್ಸೋದು ಸಹಜ.... ಇರಲಿ. ಮಗ ಹೋಗಿದ್ದು ಯಾವ ನಕ್ಷತ್ರದಲ್ಲೋ

ರಾ: ಏನಂದ್ರೀ? ಕೊಂಚ ಗಟ್ಟಿಯಾಗಿ ಹೇಳ್ರೀ...

ಶಾ: (ಜೋರಾಗಿ) ನಕ್ಷತ್ರ... ನಕ್ಷತ್ರ....

ರಾ: ಅಯ್ಯೋ ಅದೆಲ್ಲಾ ಆಮೇಲಿನದಪ್ಪಾ.... ಮದುವೆ ನಂತರದ್ದಕ್ಕೆಲ್ಲ ಐದು ನಕ್ಷತ್ರದ್ದೇ, ಫೈವ್ ಸ್ಟಾರೇ ಬುಕ್ ಮಾಡಿದಾನೆ. ಫೈವ್ ಸ್ಟಾರೂ... (ಐದು ಮತ್ತು ನಕ್ಷತ್ರ ಎರಡನ್ನೂ ಕೈಯಲ್ಲಿ ತೋರಿಸುವರು)

ಶಾ: ತಿಳೀತು... (ಲೆಕ್ಕ ಹಾಕುತ್ತಾ) ಐದನೇ ನಕ್ಷತ್ರ... ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶೀರ್ಷಾ.... (ದನಿಯೇರಿಸಿ) ಓಹೋ... ಮಾರ್ಗಶಿರಾ (ಮತ್ತೂ ಏರಿಸಿ) ಮಾರ್ಗಶಿರದಲ್ಲೇನು ಮಗ ಹೋಗಿದ್ದೂ...?

ರಾ: ಹೌದ್ಹೌದು... ಶಿರಾ ಮಾರ್ಗದ ಹೋಟೆಲಲ್ಲೇ ಇವರ ಪ್ರೇಮ ಶುರು ಆಗಿದ್ದಂತೆ...

ಶಾ: ಪಾಪ ಪಾಪ! (ಹೆಂಡತಿಯನ್ನು ತೋರಿಸುವ ಸನ್ನೆ ಮಾಡುತ್ತಾ) ನಿಮ್ಮ ಹೆಂಡತಿ ಇದನ್ನ ಹೇಗೆ ತೆಗೆದುಕೊಂಡರು?

ರಾ: (ಸನ್ನೆಯಲ್ಲೇ) ಏನನ್ನ?

ಶಾ: ನಿಮ್ಮ ಮಗ (ಜೋರಾಗಿ) ತೀರಿಕೊಂಡದ್ದನ್ನ...

ರಾ: ಮಗ ಟಿ ವಿ ಕೊಂಡದ್ದನ್ನೇ? (ರಿಮೋಟ್ ಗುಂಡಿ ಒತ್ತುವ ಆಕ್ಷನ್ ಮಾಡುತ್ತಾ) ಈಗ ರಿಮೋಟ್ ಕಂಟ್ರೋಲ್ ಅವಳ ಕೈಯಲ್ಲೇ... ಬಹಳ ಸೀರಿಯಲ್ ನೋಡ್ತಾಳೆ...

ಶಾ: ಆ? ಏನಂದ್ರಿ?

ರಾ: ತುಂಬಾ ಸೀರಿಯಲ್ಸು....

ಶಾ: ತುಂಬಾ ಸೀರಿಯಸ್ಸೇ...? ನಿಜಕ್ಕೂ? (ಸ್ವಗತ) ಅಚ್ಚೇ ದಿನ್ ಅಂದ್ರೆ ಇದೇನೇನೋ... ಒಂದೆ ತಿಂಗಳಲ್ಲಿ ಎರಡು ವೈಕುಂಠದ ಊಟ ಸಿಗೋ ಯೋಗ ಇದ್ಹಾಗಿದೆ... (ಪ್ರಕಾಶ) ಯಾವ ನರ್ಸಿಂಗ್ ಹೋಮು?

ರಾ: ಹೋಮವೇ? ಮಾಡಿಸಬೇಕು ಶಾಸ್ತ್ರಿಗಳೆ. ಗಣಹೋಮ, ಆಯುಷ್ಯ ಹೋಮ...

ಶಾ: ಯಾವುದು ಅಂದ್ರಿ?

ರಾ: (ಜೋರಾಗಿ) ಆಯುಷ್ಯ ಹೋಮಾಂದೆ...

ಶಾ: (ತಲೆಯಾಡಿಸುತ್ತಾ) ನಿಜ. ನರ್ಸಿಂಗ್ ಹೋಂಗೆ ಸೇರಿದರೆ ಇರೋ ಆಯುಷ್ಯಾನೂ ಹೋಮ ಮಾಡೋದೇ... ಛೆ! ಅಂದ್ಹಾಗೇ ರಾಯರೇ, ಮಗ ಹೋದ್ಮೇಲೆ ಏನೂ ತೊಂದರೆ ಆಗಲಿಲ್ವಾ? ಬೊಂಬು, ಗಳ, ತೆಂಗಿನಗರಿ ಎಲ್ಲವೂ ಚಟ್ಟಕ್ಕೆ ಸುಲಭವಾಗಿ ಸಿಗ್ತಾ?

ರಾ: (ಸನ್ನೆಯಿಂದ) ಏನು ಸಿಗ್ತಾ ಅಂದ್ರಿ?

ಶಾ: (ಜೋರಾಗಿ, ಸನ್ನೆಯ ಮೂಲಕ ಎಲ್ಲವನ್ನೂ ತೋರಿಸುತ್ತಾ) ಬೊಂಬು, ಗಳ, ತೆಂಗಿನಗರಿ...

ರಾ: ಹೂಂ. ಅವೆಲ್ಲ ವ್ಯವಸ್ಥೆ ಆಗಿದೆ. ಮುನಿಯಪ್ಪನೇ ಬಂದು ಚಪ್ಪರ ಹಾಕ್ತೀನಿ ಸಮಾರಾಧನೆಗೆ ಹಿಂದಿನ ದಿನ ಅಂದಿದಾನೆ. (ಎಲ್ಲವನ್ನೂ ಆಕ್ಷನ್ ಮೂಲಕ ಹೇಳುತ್ತಾನೆ)

ಶಾ: (ಜೋರಾಗಿ) ಸೌದೇನೋ, ಎಲೆಕ್ಟ್ರಿಕ್ಕೋ?

ರಾ: (ಅಷ್ಟೇ ಜೋರಾಗಿ) ಗ್ಯಾಸ್!

ಶಾ: ಕ್ಯಾಷ್? ಓ! ಸ್ಮಶಾನದಲ್ಲಿ ಇನ್ನೂ ಆನ್‌ಲೈನ್ ಟ್ರಾನ್ಸ್‌ಫರ್, ಆಧಾರ್ ಲಿಂಕ್ ಎಲ್ಲ ಬಂದಿಲ್ಲ ಅನ್ಸತ್ತೆ...! ಸರಿ. ಸಮಾರಾಧನೆಗೆ ಎಷ್ಟು ಹೊತ್ತಿಗೆ ಬರಬೇಕು?

ರಾ: (ಜೇಬಿನಿಂದ ಚೀಟಿ ತೆಗೆದು) ಇದೋ... ಚಪ್ಪರದ ಪೂಜೆಯ ಮುಹೂರ್ತ, ಹೂವೀಳ್ಯದ ಟೈಮು, ಇನ್ವಿಟೇಷನ್ ಕಾರ್ಡು ಇಷ್ಟೂ ತೊಗೊಳಿ...

ಶಾ: (ಕಾರ್ಡನ್ನು ನೋಡಿ, ಗೊಂದಲದಿಂದ) ಇಷ್ಟೆಲ್ಲ ಹತ್ತಿರದಲ್ಲಿ ಮದುವೆ ಇದ್ದಾಗ ಹೋಗಿಬಿಟ್ಟನೇ ಮಗ...? ಅಯ್ಯೋ ಪಾಪ! (ಎಂದು ಬಿಕ್ಕಿ ಅಳುವನು)

ರಾ: (ಏನೋ ಹೊಳೆದು, ಜೇಬಿಗೆ ಕೈಹಾಕಿ, ಇಯರ್ ಫೋನ್ ತೆಗೆದು ಹಾಕಿಕೊಂಡು) ಯಾಕಳ್ತಿದೀರಿ ಶಾಸ್ತ್ರಿಗಳೆ? ಏನಾಯ್ತು? ಯಾರೋ ಹೋಗ್ಬಿಟ್ಟ ಹಾಗೆ ಅಳ್ತಿದೀರಲ್ಲಾ, ಯಾಕೆ?

ಶಾ: (ತಬ್ಬಿಕೊಂಡು) ಇಷ್ಟೆಲ್ಲಾ ಪ್ಲ್ಯಾನ್ ಮಾಡಿರುವಾಗ ನಿಮ್ಮ ಮಗನ ಕೊಲೆ ಆಗಬಾರದಿತ್ತು.....

ಮುಂದಿನ ಪುಟ ನೋಡಿ ...

ರಾ: (ಶಾಸ್ತ್ರಿಗಳ ಕಿವಿಯಿಂದ ಹೊರಕ್ಕೆ ನೇತಾಡುತ್ತಿದ್ದ ಇಯರ್ ಫೋನನ್ನು ಸರಿಯಾಗಿ ಕಿವಿಗೆ ಸಿಕ್ಕಿಸಿ) ಈಗ ಹೇಳಿ.... ಯಾರ ಕೊಲೆ ಆಯಿತು?

ಶಾ: ನಿಮ್ಮ ಮಗನದು....

ರಾ: ಹುಚ್ಚಪ್ಪ... ಕೊಲೆ ಅಲ್ಲ.... ಬಲೆ... ಪ್ರೀತಿಯ ಬಲೆ...

ಶಾ: ಮತ್ತೇ..... ವೈಕುಂಠ ಸಮಾರಾಧನೆ....

ರಾ: ಅಲ್ಲ... ದೇವರ ಸಮಾರಾಧನೆ....

(ಒಂದು ಕ್ಷಣ ಇಬ್ಬರೂ ಗೊಂದಲದಿಂದ ಹೊರಬಂದು ಸಂತಸದಿಂದ ನಗುವರು. ಮರುಕ್ಷಣವೇ ಇಬ್ಬರೂ ಗೊಳೋ ಎಂದು ಅಳುತ್ತಾ.... ತಮ್ಮ ಕಿವಿಗಳಿಂದ ನೇತಾಡುತ್ತಿದ್ದ ಇಯರ್ ಫೋನ್‌ಗಳನ್ನು ನೋಡುತ್ತಾ.... ಅಯ್ಯೋ ನಮ್ಮ ಗುಟ್ಟು ಬಯಲಾಯಿತಲ್ಲಾ.... ಎಂದು ಗೋಳಾಡುತ್ತಿರುವಾಗ ತೆರೆ) ▪

ಕಥಾ ಚಿಲುಮೆ

ಕನಸಿನ ಲೋಕ

ಕನಕಾಪುರ ನಾರಾಯಣ

ಚಂದ್ರಸೇನ ಎಂಬ ರಾಜನ ರಾಜ್ಯದಲ್ಲಿ ಸತ್ಯಸೇನ ಒಬ್ಬ ನಿರುದ್ಯೋಗಿ ಯುವಕನಿದ್ದ. ಆತನಿಗೆ ರಾಜನ ಸೇವೆ ಮಾಡಬೇಕು ಎಂದು ಬಹಳ ಆಸೆ ಇತ್ತು. ಆದರೆ ಕೆಲಸ ಕೇಳಲು ಹೋದರೆ ರಾಜ ಭಟರುಅವನಿಗೆ ಅರಮನೆಯ ಒಳಗೆ ಎಂದೂ ಬಿಡುತ್ತಿರಲಿಲ್ಲ. ಒಮ್ಮೆ ರಾಜನು ಬೇಟೆಗೆ ಹೋಗುವುದನ್ನು ತಿಳಿದು ಸತ್ಯಸೇನ ತಾನೂ ಕಾಡಿನಲ್ಲಿ ರಾಜನನ್ನು ಅರಸಿ ಹುಡುಕುತ್ತಾ ಬಂದ. ಅಂದು ಅವನ ಅದೃಷ್ಟಕುಲಾಯಿಸಿತು.ಬಿಸಿಲಿನ ಬೇಗೆಗೆ ರಾಜ ದಣಿವಾರಿಸುತ್ತಿರಲು, ಅಲ್ಲಿಗೆ ಬಂದು ರಾಜನಿಗೆ ನೀರು, ನಲ್ಲಿ ಕಾಯಿ ಕೊಟ್ಟ, ರಾಜನಿಗೆ ಸಂತೋಷವಾಯಿತು.

ಮರುದಿನ ಅರಮನೆಗೆ ಬರಲು ಹೇಳಿದ. ಆದರೆಸತ್ಯಸೇನ ರಾಜನನ್ನು ಕಾಣಲು ತನ್ನ ಹಿಂದಿನ ವಿಫಲ ಪ್ರಯತ್ನ ತಿಳಿಸಿದ. ರಾಜ ತನ್ನ ರಾಜಮುದ್ರೆಯನ್ನು ಕೊಟ್ಟು ಅವನಿಗೆ "ಇದನ್ನು ತೋರಿಸು,ಸಲೀಸಾಗಿ ಅರಮನೆಯ ಒಳಕ್ಕೆ ಬರಬಹುದು ಎಂದ'. ಹಾಗೇ ಆಯಿತು. ನಂತರ ಅವರ ಸ್ನೇಹವೂ ಹೆಚ್ಚಿತು. ಒಮ್ಮೆ ರಾಜ ಸತ್ಯಸೇನನನ್ನು ಒಂದು ದೋಣಿಯಲ್ಲಿ ಹಲವು ಸೈನಿಕರೊಡನೆ ಸಮುದ್ರಲ್ಲಿ ಪ್ರಯಾಣಿಸಲು ಕಳುಹಿಸಿ, ಸುತ್ತಲಿನ ಊರು,ದ್ವೀಪಗಳನ್ನುತಿಳಿದು ಬರಲು ಹೇಳಿದ.ರಾಜನ ಆಜ್ಞೆಯಂತೆ ಹಾಗೇ ದೋಣಿಯಲ್ಲಿ ಸಾಗುತ್ತಿರಲು ನೀರಿನ ಮಧ್ಯೆ ಒಂದು ಬಾವುಟ ಕಂಡಿತು. ಸತ್ಯಸೇನ ತಾನೇ ಖುದ್ದಾಗಿ ನೀರಿಗೆ ಧುಮುಕಿ ನೋಡಲು ಹೋದ,ಆಳದಲ್ಲಿಒಬ್ಬ ಸುಂದರಿ ರಾಣಿ ಇದ್ದಳು, ಜೊತೆಗೆ ಸಖಿಯರು,ಸೈನಿಕರು,ಅವರನ್ನು ಸ್ನೇಹದಿಂದ ಮಾತನಾಡಿಸಿದ, ಆದರೆ ಅವರು ಊಟ ಕೊಡುವ ನೆಪದಲ್ಲಿ ಮೊದಲು ಸ್ನಾನ ಮಾಡಿ ಬರಲು ಹೇಳಿ ಆತನನ್ನುಒಂದು ದೊಡ್ಡ ಹೊಂಡಕ್ಕೆ ತಳ್ಳಿಬಿಟ್ಟರು. ಮೇಲೆ ದೋಣಿಯಲ್ಲಿ ಕಾಯುತ್ತಿದ್ದವರು ಸತ್ಯಸೇನನ ಪ್ರಾಣ ಹೋಗಿದೆ ಎಂದು ತಿಳಿದು ರಾಜ್ಯಕ್ಕೆ ಮರಳಿದರು. ರಾಜ ಸತ್ಯಸೇನನನ್ನು ಕಳೆದುಕೊಂಡ ಚಿಂತೆಯಲ್ಲಿಕಡಲ ತೀರದಲ್ಲಿ ಕುಳಿತಿರಲು, ಅಲ್ಲಿಗೆ ಈಜುತ್ತಾ ಸತ್ಯಸೇನ ಬಂದ, ತಾನು ಪಾರಾಗಿ ಬಂದ ಜಾಗಕ್ಕೆ ರಾಜನನ್ನು ಕರೆದೊಯ್ದ. ರಾಜ ಈಗ ಸಕಲ ಸಿದ್ಧತೆ ಮಾಡಿಕೊಂಡು ಶಸ್ತ್ರ ಸಮೇತ ಅಲ್ಲಿಗೆ ಹೋಗಿಅಲ್ಲಿದ್ದ ಸೈನಿಕರನ್ನು ಸದೆಬಡಿದು ಅಲ್ಲಿನವರನ್ನು ಗೆದ್ದು ಆ ಸ್ಥಳಕ್ಕೆ ಸತ್ಯಸೇನನನ್ನೇ ರಾಜನನ್ನಾಗಿ ಮಾಡಿದ.ಅಲ್ಲಿದ್ದ ರಾಣಿಯ ಜೊತೆ ಮದುವೆಯನ್ನೂ ಮಾಡಿಸಿದ. .. .. ಎಂದು ಹೇಳಿ ಕಥೆ ಅಲ್ಲಿಗೇನಿಲ್ಲಿಸಿತು ಬೇತಾಳ.....

ಬೇತಾಳದ ಪ್ರಶ್ನೆ ಹೀಗಿತ್ತು: ಚಂದ್ರಸೇನ ಮತ್ತು ಸತ್ಯಸೇನ ಇವರಲ್ಲಿ ಯಾರು ಹೆಚ್ಚು ಸಾಹಸಿಗರು?

ಅದಕ್ಕೆ ವಿಕ್ರಮನ ಉತ್ತರ: "ಅವರಿಬ್ಬರಲ್ಲಿ ಶಸ್ತ್ರ ಇಲ್ಲದೆ ನೀರಿಗಿಳಿದು,ಅಲ್ಲಿಂದ ಪಾರಾಗಿ ಬಂದ ಸತ್ಯಸೇನನೇ ಹೆಚ್ಚು ಸಾಹಸಿಗ, ರಾಜನಿಗೆ ಆ ಸ್ಥಳವು ತಿಳಿದಿರಲಿಲ್ಲ ಮತ್ತು ಅವನ ಬಳಿ ಅಸ್ತ್ರಗಳಿದ್ದವು " ಎಂದಿತ್ತು.

ಉತ್ತರ ಮೆಚ್ಚಿದ ಬೇತಾಳ " ವಿಕ್ರಮ ಸರಿಯಾದ ಉತ್ತರ ಹೇಳಿರುವೆ " ಎಂದು ಹೇಳಿ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು. ▪



ನಿಂಬೆಕಾಯಿ ಸಾರು

ಬೇಕಾಗುವ ಸಾಮಗ್ರಿಗಳು

- ಮೂರು ನಿಂಬೆಹಣ್ಣು, ಒಂದು ಬಟ್ಟಲು ತೊಗರಿಬೇಳೆ, ಎರಡು ಮಾಗಿದ ಟೊಮಾಟೋ ಹಣ್ಣು
- ಎರಡು ಹಸಿ ಮೆಣಸಿನ ಕಾಯಿ, ಮೂರು ಕೆಂಪು ಮೆಣಸಿನ ಕಾಯಿ
- ಕಡ್ಲೇ ಬೇಳೆ ಕೊತ್ತಂಬರಿ ಬೀಜ ತಲಾ ಒಂದು ಚಮಚ
- ಜೀರಿಗೆ,ಮೆಣಸು,ಅರಿಶಿನ,ಸಾಸಿವೆ ತಲಾ ಅರ್ಧ ಚಮಚ
- ಒಗ್ಗರಣೆಗೆ ಚಿಟಿಕೆ ಇಂಗು, ಎಣ್ಣೆ, ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ

- ಬೇಳೆಯನ್ನು ಅರಿಶಿನ ಬೆರೆಸಿ ಬೇಯಿಸಿ ಚೆನ್ನಾಗಿ ತಿರುವಿ ಇಡಿ
- ಹುರಿದ ಒಣ ಮೆಣಸಿನ ಕಾಯಿ, ಕೊತ್ತಂಬರಿ ಬೀಜ, ಕಡ್ಲೇಬೇಳೆ, ಮೆಣಸು, ಜೀರಿಗೆ, ಇಂಗು ಎಲ್ಲಾ ಒಣಗಿಸಿ ಕುಟ್ಟಿ ಅಥವಾ ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ
- ಎರಡು ಬಟ್ಟಲು ನೀರು ಕುದಿಸಿ ಅರಿಶಿನ ಹೆಚ್ಚಿದ ಟೊಮಾಟೋ,ಕತ್ತರಿಸಿದ ಹಸಿ ಮೆಣಸಿನ ಕಾಯಿ ಉಪ್ಪು ಹಾಕಿ ಬೇಯಿಸಿ
- ನೀರು ಕುದಿಯುವಾಗ ಬೇಳೆ ಬೆರೆಸಿ ಎರಡು ಬಾರಿ ತಿರುವಿ ರುಬ್ಬಿದ ಪುಡಿ ಬೆರೆಸಿ ಕುದಿಸಿ
- ನಿಂಬೆ ರಸವನ್ನು ಬೆರೆಸಿದ ನಂತರ ಸಾಸಿವೆ ಕರಿಬೇವು ಒಗ್ಗರಣೆ ಹಾಕಿ ಒಲೆಯಿಂದಿಳಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ನಾಲ್ಕು ಕಾಲುಗಳುಂಟು ಪ್ರಾಣಿಯಲ್ಲ ! ಬೆನ್ನು ತೋಳುಂಟು ಮನುಷ್ಯನಲ್ಲ

೨. ಹಿಡಿ ಹಿಡಿದರೆ ಹಿಡಿ ತುಂಬಾ ! ಬಿಟ್ಟರೆ ಮನೆ ತುಂಬಾ

ಉತ್ತರಕ್ಕೆ ಪುಟ ೧೧ ನೋಡಿ

ಗೆ ...

ನಗುವ ತಿಂಗಳಾಡುವಾಗ
ಕರಿಮುಗಿಲಿನ ಪತ್ತಲ
ತಿಳಿ ಬೆಳಕಲಿ ಆಡುವಾಗ
ಸುರಿದಿತೇಕೆ ಕತ್ತಲ

ಸೊಗವು ಬಾಳಲಾಡುವಾಗ
ದುಮ್ಮಾನದ ಛೇಟಿ
ನಂಬಿ ಬದುಕ ನಡೆಸುವಾಗ
ಬೆನ್ನಿಗಿರಿದೆ ಈಟಿ

ಬಳಿಗೆ ಬರುವೆನೆನ್ನುವಾಗ
ಸರಿದೆ ಏಕೆ ದೂರ
ಸುಖವ ಕೋರಿ ಬೆರೆಯುವಾಗ
ಎದೆಯು ಏಕೆ ಭಾರ

ಅರಿತೆನೆಂದು ಮೆರೆಯುವಾಗ
ನಮ್ಮ ನಡುವೆ ಬಿರುಕು
ಮೊಗೆದು ಏಕೆ ಕೊಟ್ಟೆ ನೀನು
ಬೇಡವಾದ ಸರಕು

ನಮ್ಮ ನಡುವೆ ಸರಿಯಿತೇಕೆ
ಶಂಕೆ ಎಂಬ ಹಾವು
ಉರಿದು ಬೂದಿಯಾಯ್ತು ಸೂರು
ಒಳಗೆ ಇಳಿದು ಕಾವು

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಹದಿನಾಲ್ಕು ವರುಷ ಕಳೆದದ್ದು ಮನೆಯಲ್ಲಲ್ಲ

೨. ಕತ್ತಲಿನಿಂದ ಈ ಕಡೆಗೆ

೩. ಗೊಗ್ಗಯ್ಯ ಬಂದರೂ, ನಿದ್ರೆ ಜೋರಾಗಿದೆ

೪. ..... ಪಟ್ಟರೆ ಒಳ್ಳೆಯ ಫಲ



೫. ಏಟಿಯಂ ಗಳ ಮುಂದೆ ನನಗಾಗಿ ಸಾಲು

೬. ಯುವತಿಯ ಕಂಡ ಯುವಕನಿಗೆ ಎದೆಯಲ್ಲಿ ಏನೋ

ಉತ್ತರ: ಚಾವುಂಡರಾಯ ಕೆತ್ತಿಸಿದ ದಿಗಂಬರ ನಿಂತ ಸ್ಥಳ



ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಮಾರ್ಚ್ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಡಿಸೆಂಬರ್-ಜನವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಗಣೇಶ್ ಕುಮಾರ್, ಬೆಂಗಳೂರು
- ಗೀತಾ ಟಿ. ಆರ್, ಬೆಂಗಳೂರು
- ಪುಷ್ಪವಲ್ಲಿ ಚಂದ್ರಶೇಖರ್, ಬೆಂಗಳೂರು
- ವತ್ಸಲಾ ದ್ವಾರಕಾನಾಥ್, ಬೆಂಗಳೂರು

೧. ನಾಲ್ಕುಯುಗಗಳಲ್ಲಿ ಒಂದಲ್ಲದ ಇದರಲ್ಲಿ ಕಲ್ಲಿನದೇ ಪ್ರಾಧಾನ್ಯತೆ.

ಶಿ	ಲಾ	ಯು	ಗ

೨. ಛೇ, ಈ ರೀತಿ ನಡೆಯುವುದು ಕಾನೂನು ಬಾಹಿರ.

ಅ	ಕ್ರ	ಮ

೩. ಭಾಷಾ ಪಂಡಿತರ ಮನೆ ಎಲ್ಲಿದೆ ಎಂದರೆ, ಅವನು ಹೋರಿಸಿದ ಕಿರಿದಾದ ಓಣಿ.

ಸಂ	ಧಿ

೪. ಆಕಳೊಡನೆ ಬಂದ ರತಿಯ ಪತಿ.

ಮ	ದ	ನ

೫. ನೀವು ಆಡಿದುದೇ ಕತೆ ಮುಂಚೆ ಬರುವಂತದ್ದು.

ಮಾ	ತು

೬. ಮೊದಲ ಪೂಜೆ ಗುಂಪಿನ ಈ ಯಜಮಾನನಿಗೆ.

ಗ	ಣ	ಪ	ತಿ

ಉತ್ತರ - ಸೂರ್ಯನು ರಾಶಿ ಬದಲಿಸುವಾಗ ಭಾಗಮಂಡಲದಲ್ಲಿ ಸಂಭ್ರಮದ ದಿನ.

ತು	ಲಾ	ಸಂ	ಕ್ರ	ಮ	ಣ

ಜಾಣ ಕರ್ನಾಟಕ

೧. ಶ್ರವಣಬೆಳಗೊಳದ ಗೊಮ್ಮಟೇಶ್ವರನನ್ನು ಕಡೆದ ಚಾವುಂಡರಾಯನ ಕಾಲದಲ್ಲಿ ಯಾವ ರಾಜರ ಆಳ್ವಿಕೆಯಿತ್ತು

೨. ಗೊಮ್ಮಟೇಶ್ವರನಿಗೆ ದೃಷ್ಟಿದೋಷವಾಗದಿರಲೆಂದು, ಆ ಮೂರುತಿಯಲ್ಲಿ ಇಟ್ಟಿರುವ ದೋಷವೇನು

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಒಗಟು - ಉತ್ತರ

೧. ಕುರ್ಚಿ ೨. ದೀಪ

ಹಾಸ್ಯ ಚಿಲುಮೆ

ಅಜ್ಜ: ಲೋ ಗುಂಡ ನಿಮ್ಮ ಮೇಷ್ಟ್ರು ಬರ್ತಿದ್ದಾರೆ ಬಚ್ಚಿಟ್ಕೋ

ಗುಂಡ:ಮೊದಲು ನೀನು ಬಚ್ಚಿಟ್ಕೋ ಮೊನ್ನೆ ನೀನು ಸತ್ತೆ ಅಂತ ಶಾಲೆಗೆ ಚಕ್ಕರ್ ಹಾಕಿದ್ದೆ.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಹೊಣೆಗಾರ ... (ಭಾಗ ೧)

ರಚನೆ:
ನಾಗಶೈಲ ಕುಮಾರ್

ಮನೂ....ಮನೂ.....
ಶಕ್ತಿ ಮೀರಿ ಕೂಗಿದೆ,

ಉತ್ತರವೇನಾದರೂ ಬರುತ್ತದೇನೋ ಎಂದು ಕಿವಿಗೊಟ್ಟು ಆಲಿಸಿದೆ.
ಕೆಳಗಿನ ಕಣಿವೆಯ ಬಂಡೆ ಬಂಡೆಗಳಿಂದ,

ಮನೂ....ಮನೂ.....
ಮನೂ....ಮನೂ.....
ಎಂಬ ಕೂಗು ಮತ್ತೆ ಮತ್ತೆ ಕೇಳಿಸಿತು,

ಆದರೆ ಅದು ನನ್ನದೇ ಪ್ರತಿಧ್ವನಿ.
ಚಂದೂ... ಚಂದೂ.... ಎಂದು, ಮನು ಹಿಂದಿರುಗಿ ಕೂಗುತ್ತಾನೇನೋ ಎಂದು ಕಾತರಿಸಿದ್ದೆ.

ನೂರಾರು ಅಡಿಗಳ ಕೆಳಗೆ, ಹಳ್ಳದಲ್ಲಿ ಬೀಳುತ್ತಿದ್ದ ಜಲಪಾತದ ನೀರಿನ
ಅಸ್ಪಷ್ಟ ಸದ್ದು ಬಿಟ್ಟರೆ, ಬೇರಾವುದೇ ಸದ್ದಿಲ್ಲ.
ಗಾಬರಿಯಿಂದ ಮತ್ತೊಮ್ಮೆ ಕೂಗಿದೆ,
ಮನೂ.....ಮನೂ.....

ಮತ್ತದೇ ಪ್ರತಿಧ್ವನಿಯ ಪುನರಾವರ್ತನೆ.
ಉಳಿದಂತೆ ಭೀಕರ ಮೌನ.

ಟಿಸಿಲು ಟಿಸಿಲಾಗಿ, ತೆಳ್ಳಗೆ ಹರಿದು ಬರುತ್ತಿದ್ದ ನೀರಿನ ನಡುವೆ, ಪಾಚಿಯಿರದೆ, ಒಣಗಿದ್ದ ಬಂಡೆಗಳ ಮೇಲೆ ಜೋಪಾನವಾಗಿ ಹೆಜ್ಜೆ ಇಡುತ್ತಾ, ನೀರು ಕೆಳಗೆ ಧುಮುಕುವೆಡೆಗೆ ಸಾಗಿದೆ. ತುಸು ಎಚ್ಚರ ತಪ್ಪಿದರೂ, ನಯವಾದ ಬಂಡೆಗಳ ನಡುವೆ ಜಾರುವುದು ಖಂಡಿತ, ಜಾರಿದರೆ ಹರಿಯುತ್ತಿರುವ ನೀರಿನೊಡನೆ ನಾನೂ ಸಹ ಪಾತಾಳದಲ್ಲಿ ಇರುತ್ತೇನೆ.

"ನಾನೂ ಸಹ ಪಾತಾಳದಲ್ಲಿ", ಅಂದರೆ ಮನೂ ಈಗ ಕೆಳಗೆ ಬಿದ್ದು ಹೋಗಿದ್ದಾನೆ. ಯೋಚಿಸಿ ಮೈ ನಡುಗಿತು.
"ಇಲ್ಲ ಇಲ್ಲ, ಇಲ್ಲೇ ಎಲ್ಲೋ ಇರುತ್ತಾನೆ, ಯಾವುದೋ ಬಂಡೆಯ ಸಂದಿನಲ್ಲೋ, ಅಲ್ಲಲ್ಲಿ ಬೆಳೆದಿರುವ ಗಿಡಗಂಟಿಗಳ ಆಸರೆಯಾಗಿ ಹಿಡಿದುಕೊಂಡು ಇರುತ್ತಾನೆ", ಸುಳ್ಳು ಸಮಾಧಾನ ಮಾಡಿಕೊಂಡು, ಮನು ಕೆಳಗೆ ಜಾರಿದ್ದ ಹರಿವಿನ ಬಳಿಗೆ ಬಂದೆ. ಒಣಗಿದ ಒಂದು ವಿಶಾಲವಾದ ಬಂಡೆಯ ಮೇಲೆ ಬೋರಲಾಗಿ ಮಲಗಿ ಕೆಳಗೆ ನೋಡಿದೆ.

ಎದೆ ನಡುಗಿತು, ತಳವೇ ಇಲ್ಲವೇನೋ ಎನ್ನುವಂತಿತ್ತು ಪ್ರಪಾತ. ಕಣ್ಣು ಕತ್ತಲಿಟ್ಟುಕೊಂಡು ಬರುವಂತಾಯಿತು. ಕೆಲ ಕ್ಷಣಗಳು ದಿಟ್ಟಿಸಿ ನೋಡಿದ ನಂತರ, ನಿಧಾನವಾಗಿ ಕೆಳಗಿನ ನೀಲ ನೀರಿನ ಮಡು ಕಂಡಿತ್ತು. ಮನು ಜಾರಿದ್ದ ಜಾಗದೆಡೆ ನೋಡಿದೆ. ಇಲ್ಲಿಂದ ನೇರವಾಗಿ ಕೆಳಗಿದ್ದ ಮಡುವಿಗೇ ಕಟ್ಟಿದಂತಿದ್ದ ಬಂಡೆ. ನಡುವಲ್ಲಿ ಅಡೆತಡೆಯೇ ಇಲ್ಲ. ಇಲ್ಲಿಂದ ಏನೇ ಬಿದ್ದರೂ ನೇರ ಮಡುವಿನೊಳಗೆ.

ಅಂದರೆ ಮನು ಇನ್ನಿಲ್ಲ. ಎರಡು ನಿಮಿಷಗಳ ಹಿಂದೆ ನನ್ನೊಡನೆ ಇದ್ದ ಮನು ಇನ್ನು ಬರುವುದಿಲ್ಲ. ಸತ್ಯವನ್ನು ಈಗ ಒಪ್ಪಿಕೊಳ್ಳಲೇ ಬೇಕಾಯಿತು.

ಭಯ ಆವರಿಸಿ, ಎದೆಯಲ್ಲಿ ನೋವುಂಟಾಯಿತು.

ಮುಂದಿನ ಪುಟ ನೋಡಿ ...

ಬಿಕ್ಕಿ ಬಿಕ್ಕಿ ಅತ್ತೆ, ಜೋರಾಗಿ ರೋಧಿಸಿದೆ. ಯಾಕೆ, ಏನು ಎಂದು ಕೇಳುವವರು ಯಾರೂ ಇಲ್ಲ.

"ನಿಜವೇ ಇದೆಲ್ಲಾ? ಕನಸಲ್ಲವಾ? ದೇವರೇ, ಮನು ಜಾರಿ ಬಿದ್ದಿದ್ದು ಕನಸಾಗಿರಲಿ" ಎನ್ನುತ್ತಾ ನನ್ನನ್ನೇ ಚಿವುಟಿಕೊಂಡೆ, ನೋವಾಯಿತು, ಅಂದರೆ.....
ಏನು ಮಾಡಲಿ ಮುಂದೆ ನಾನು, ಕೆಳಗಿಳಿದು ಹೋಗಿ, ಮನುವನ್ನು ಹುಡುಕಬೇಕು. ಕೆಳಗಿಳಿಯಬೇಕೆಂದರೆ, ಜಲಪಾತದ ಎದಿರುಬದಿಗೆ ಹೋಗಬೇಕು. ಜಲಪಾತ ವೀಕ್ಷಿಸಲು ಕಟ್ಟಿರುವ ಕಟಾಂಜನದ ಬಳಿಯಿರುವ ಮೆಟ್ಟಿಲಿನಿಂದ ಕೆಳಗೆ ಹೋಗಬಹುದಂತೆ. ಈಗ ಆ ಬದಿಗೆ ತಲುಪಲೇ ಒಂದು ಗಂಟೆ ಬೇಕಾದೀತು. ಅಷ್ಟು ಹೊತ್ತಿಗೆ ಮನುವಿನ ದೇಹ ನೀರಿನಲ್ಲಿ ಕೊಚ್ಚಿ ಹೋಗಿದ್ದರೆ?
ಜಲಪಾತದ ಈ ಬದಿಗೆ ಬರಲೇ ಬಾರದಿತ್ತು, ಅಲ್ಲೇ ನಿಂತು ನೋಡಿದ್ದರೆ ಸಾಕಿತ್ತು. ಬೇಡ ಬೇಡ ಎಂದರೂ ಮನು ಕೇಳಲಿಲ್ಲ. ಪ್ರವಾಸ ಬಂಗಲೆ ಇರುವ ಕಡೆಗೆ ಹೋಗೋಣ ಬಾ ಎಂದು ಬಲವಂತ ಮಾಡಿದ. ಇಲ್ಲಿ ಬಂದದಕ್ಕೇ ಅವನು ಕೆಳಗೆ ಬಿದ್ದಿದ್ದು, ಛೇ ಅವನು ಗಲಾಟೆ ಮಾಡಿರದಿದ್ದರೆ ಹೀಗಾಗುತ್ತಿರಲಿಲ್ಲ.

ಆದರೆ ಅವನನ್ನು ಇದೇ ಜಲಪಾತಕ್ಕೆ ಹೋಗಬೇಕೆಂದು ಹಠ ಹಿಡಿದು ಕರೆದುಕೊಂಡು ಬಂದವನು ನಾನಲ್ಲವೇ?

ಈಗ ನೀರಿಲ್ಲವಂತೆ, ಬರೀ ಬಂಡೆಗಳ ನೋಡೋದಕ್ಕೆ ಅಷ್ಟು ದೂರ ಹೋಗ್ಬೇಕ ಅಂತ ಮನು ಹಿಂದೇಟು ಹಾಕಿದರೂ ಬಿಡದೆ, ಒತ್ತಾಯಿಸಿ ಹೊರಡಿಸಿದೆ. ಪಾಪ ಒಳ್ಳೆಯವನು, ಅದರಲ್ಲೂ ನಾನೆಂದರೆ, ವಿಶೇಷ ಪ್ರೀತಿ, ಸಲುಗೆ. ಅವನ ಮನೆಯವರಿಗೂ ಅಷ್ಟೇ, ಅದರಲ್ಲೂ ಅವನ ಅಮ್ಮ... ಅವರಿಗೆ ಸಾಲಾಗಿ ಮೂರು ಹೆಣ್ಣು, ಕಡೆಯದಾಗಿ ಒಂದು ಗಂಡು. ಮನು ತಂದೆಯನ್ನು ಕಾಣಲೇ ಇಲ್ಲ. ಹೆಣ್ಣು ಮಕ್ಕಳು ಚೆನ್ನಾಗಿ ಓದಿ ಕೆಲಸಗಳ ಹಿಡಿದ ನಂತರ, ಕಷ್ಟ ಪಟ್ಟು ದುಡಿದು ಸಾಕಿದ ಅಮ್ಮನನ್ನು ಮಗುವಿನಂತೆ ನೋಡಿಕೊಂಡಿದ್ದರು. ಮನುವನ್ನು ಅತಿ ಮುದ್ದಿನಿಂದ ಬೆಳೆಸದೆ, ಅವನಿಗೆ ಬದುಕಿನಲ್ಲಿ ಎದುರಿಸಬೇಕಾದ ಕಷ್ಟಗಳ ಅರಿವಿರುವಂತೆ, ತಾಯಿ ಮತ್ತು ಅಕ್ಕಂದಿರು ಎಚ್ಚರ ವಹಿಸಿದ್ದರು.

ಅವರ ಮನೆಯಲ್ಲಿ ಮುಕ್ತ ವಾತಾವರಣ, ಕಟ್ಟುಪಾಡುಗಳು ಕಡಿಮೆ. ಅವರ ಮನೆಯಲ್ಲಿ ದೇವರನ್ನು ಪೂಜಿಸಿದ್ದೇ ಕಾಣೆ. ಆ ನಾಲ್ಕು ಜನ ಮಕ್ಕಳಿಗೂ ಅಮ್ಮನೇ ದೇವರು. ಮನುವಂತೂ, ಅಮ್ಮನನ್ನು ಯಾವ ಯಾವ ರೀತಿಯಲ್ಲಿ ಸುಖವಾಗಿಡಬಹುದೆಂದು ಸದಾ ಯೋಚಿಸುತ್ತಿದ್ದ. ನಾನು ಅವನು ಸದಾ, ಅಲ್ಲಿ ಇಲ್ಲಿ ಹೋಗುತ್ತಲೇ ಇರುತ್ತಿದ್ದೆವು.

ನನ್ನ ಜೊತೆ ಬಂದರೆ ಅವರಿಗೆಲ್ಲಾ ಒಂದು ರೀತಿಯ ನೆಮ್ಮದಿ. "ನೀನು ಬೇರೆಯವರ ಹಾಗೆ ತರಲೆ ಹುಡುಗನಲ್ಲ, ಅವನ ಜೊತೆಗೆ ನೀನಿದ್ದರೆ, ನಾವಿಲ್ಲಿ ನಿಶ್ಚಿಂತೆಯಿಂದ ಇರಬಹುದು", ಎನ್ನುತ್ತಿದ್ದರು ಅವರಮ್ಮ.
ಈಗ ನಾನವರಿಗೆ ಏನೆಂದು ಹೇಳಲಿ? ಹೇಗೆ ಮುಖ ತೋರಿಸಲಿ? ಆ ತಾಯಿಯ ಹೃದಯ ಹೇಗೆ ತಡೆದೀತು? ಸುದ್ದಿ ಕೇಳಿ ಅವರ ಪ್ರಾಣವೂ ಹೋದರೆ, ಮೈ ನಡುಗಿತು.

ಇಲ್ಲ ಇದಾದದ್ದು ನನ್ನಿಂದಲೇ, ಅವನು ಹೇಳಿದಂತೆ ಬೇರೆಲ್ಲಾದರೂ ಹೋಗಿದ್ದರೆ ಹೀಗಾಗುತ್ತಿರಲಿಲ್ಲ. ಅವರುಗಳ ಎದುರೇ ಬಲವಂತ ಮಾಡಿ ಅವನನ್ನು ಹೊರಡಿಸಿದ್ದೆ, ಏನುತ್ತರ ಕೊಡಲಿ ಈಗ. ನಾನವರಿಗೆ ಮುಖ ತೋರಿಸಲಾರೆ, ಅವನನ್ನು ಬಿಟ್ಟು ಹಿಂದಿರುಗಿ ಹೋಗಲಾರೆ. ಇರುವುದೊಂದೇ ದಾರಿ....

ಹೌದು, ನಾನೂ ಅವನೊಟ್ಟಿಗೆ ಹೋಗುವುದು. ಅವನು ನನ್ನ ಪ್ರಾಣ ಸ್ನೇಹಿತ, ಪ್ರಾಣವನ್ನೂ ಒಟ್ಟಿಗೇ ಕಳೆದುಕೊಳ್ಳಬೇಕೆಂದು ಬರೆದಿತ್ತೇನೋ", ಮತ್ತೆ ಯೋಚಿಸದೆ ಅವನು ಜಾರಿದ್ದ ನೀರಿನ ಹರಿವಿನ ಕಡೆಗೆ ನಡೆದೆ. ಜಾರುತ್ತಿದ್ದ ಬಂಡೆಗಳು, ಮೊನಚಾದ ಕಲ್ಲುಗಳ ಲೆಕ್ಕಿಸದೆ ಹೆಜ್ಜೆ ಇಡುತ್ತಿದ್ದಾಗ, ಅಷ್ಟು ಹೊತ್ತೂ ಮರೆಯಲ್ಲಿದ್ದ ರಾಜೀವ ಧುತ್ತೆಂದು ಕಾಣಿಸಿದ. ಛಳಿ ಜ್ವರ ಬಂದ ಹಾಗೆ ಮೈ ನಡುಗಲಾರಂಭಿಸಿತು.

"ಮನೂ.... ಮನೂ..... ಬೇಗ ಬಾ", ಕಣ್ಣು ಮುಚ್ಚಿಕೊಂಡು ಹುಚ್ಚನಂತೆ ಕೂಗಿದೆ.
ಕಣ್ಣು ತೆಗೆದು ರಾಜೀವನ ಕಡೆ ನೋಡಲು ಭಯವಾಗುತ್ತಿತ್ತು.
"ಮನೂಗೆ ಹೇಳಿದೆ, ನನ್ನ ಹತ್ತಿರ ಬರಬೇಡ ಅಂತ, ಅವನು ನನ್ನ ಮಾತು ಕೇಳಲಿಲ್ಲ. ಅವನ ಸಾವಿಗೆ ಕಾರಣ ನೀನಲ್ಲ, ನಾನು. ಈಗ ನನ್ನಿಂದಾಗೇ ನೀನೂ ಸಾಯ್ತೀಯ", ರಾಜೀವ ಗಹಗಹಿಸಿ ನಗುತ್ತಾ ನುಡಿದಂತಾಯ್ತು.
ಮೆಲ್ಲನೆ ಕಣ್ತೆರೆದು ನೋಡಿದೆ. ಗಾಳಿಗೆ ಹೋಯ್ದಾಡುತ್ತಿದ್ದ ನೀರಿನಲ್ಲಿ ತೇಲಾಡುತ್ತಿದ್ದ ರಾಜೀವ,
ನಿರ್ಜೀವವಾಗಿ. ...

ಮುಂದುವರೆಯುವುದು ...

ಮಾನವನ ನಾಡಿಮಿಡಿತವನ್ನು ಈ ಸರಳ ಪ್ರಯೋಗದಿಂದ ದೃಶ್ಯೀಕರಿಸಬಹುದು (Visualize) !



ಬೇಕಾಗುವ ಸಾಮಾನು:

ಡ್ರಾಯಿಂಗ್ ಪಿನ್, ಬೆಂಕಿ ಕಡ್ಡಿ

ವಿಧಾನ

ಬೆಂಕಿಕಡ್ಡಿಯ ಬುಡಕ್ಕೆ ಒಂದು ಡ್ರಾಯಿಂಗ್ ಪಿನ್ ಚುಚ್ಚಿರಿ.

ಇದನ್ನು, ನಿಮ ಕೈನ ಮಣಿಕಟ್ಟಿನ (wrist) ಜಾಗದಲ್ಲಿ ಸಮತೋಲನ ಬರುವಂತೆ ನಿಲ್ಲಿಸಿ.

ಸಮತೋಲನ ಬರಲು ನಿಮ್ಮ ಕೈಯನ್ನು ಒಂದು ಬೆಂಚಿನ ಮೇಲೆ ಇಡಬಹುದು.

ನಿಧಾನವಾಗಿ ಗಮನಿಸಿದಾಗ ಬೆಂಕಿಕಡ್ಡಿ ಅತ್ತಿಂದಿತ್ತ ವಾಲುವುದನ್ನು ಕಾಣಬಹುದು.

ನಾಡಿಮಿಡಿತ ಏಕೆ ?

ಹೃದಯದ ಎದೆಬಡಿತ ದೇಹದ ಅಪಧಮನಿ ವ್ಯವಸ್ಥೆಯಲ್ಲಿ (arterial system) ನಾಡಿಮಿಡಿತವನ್ನು (pulse) ತರುತ್ತದೆ. ಇದನ್ನು sthethoscope ಮೂಲಕವೂ ಕೇಳಿಸಿಕೊಳ್ಳಬಹುದು. ಮನೆಯಲ್ಲಿ ಮೇಲೆ ತಿಳಿಸಿದ ಸುಲಭ ಮಾರ್ಗದಿಂದ ನೋಡಬಹುದು ▪

ಜಾಣ ಕರ್ನಾಟಕ – ಉತ್ತರ

೧. ಗಂಗರ ಆಳ್ವಿಕೆಯಿತ್ತು

೨. ಮೂರುತಿಗೆ ದೃಷ್ಟಿದೋಷವಾಗದಿರಲೆಂದು, ಎಡಗೈ ತೋರುಬೆರಳು ಬಲಗೈದಕ್ಕಿಂತ ಒಂದಂಗುಲ ಕಡಿಮೆಯಿದೆ

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ನಾದ ಸಂಭ್ರಮ

ಸಂಗೀತ ಸಂಜೆ

೧೭ ಮಾರ್ಚ್ ೨೦೧೮, ಸಂಜೆ ೬ ಘಂಟೆಗೆ

ಬುಕ್ ಮಾಡಲು ಕರೆ/ಇಮೇಲ್ ಮಾಡಿ

ನಾರಾಯಣ - 0423 634 979 / ಅಶ್ವಿನ್ - 0421 221 353

sugamakannada@gmail.com

ಹೋಳಿ ಮೇಳ

೦೪-ಮಾರ್ಚ್-೨೦೧೮ – ಬೆಳಿಗ್ಗೆ ೧೧ - ಸಂಜೆ ೪

Blacktown Showground BLACKTOWN

ಹೆಚ್ಚಿನ ಮಾಹಿತಿಗೆ:

1300338368

www.eventproductions.com.au

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.